ಹೆಚ್.ಡಿ. ಕೋಟೆ ತಾಲ್ಲೂಕಿಗೆ ಕೃಷಿ ಇಲಾಖೆಯಿಂದ ಒದಗಿಸಿರುವ ಸೌಲಭ್ಯಗಳ ಬಗ್ಗೆ

೧೪೨೩ (೨೬೧೭) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೆಚ್.ಡಿ. ಕೋಟೆ ತಾಲ್ಲೂಕಿಗೆ ಕೃಷಿ ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ ಒದಗಿಸಿರುವ ಸೌಲಭ್ಯಗಳೇನು ?

ಆ) ಯಾವ ಯಾವ ಯೋಜನೆಗಳಿಗೆ ಒದಗಿಸಲಾಗಿರುವ ಹಣ ಎಷ್ಟೆಷ್ಟು? (ವಿವರ ನೀಡುವುದು)

ಇ) ೧೯೮೭-೮೮ನೇ ಸಾಲಿನಲ್ಲಿ ಗಿರಿಜನ ಯೋಜನೆಯಲ್ಲಿ ಕೃಷಿ ಇಲಾಖೆ ಮೂಲಕ ಗಿರಿಜನರಿಗೆ ಒದಗಿಸಿರುವ ಸೌಲಭ್ಯಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಮತ್ತು ಆ) ಕೃಷಿ ಇಲಾಖೆಯು ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ರ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕಿಗೆ ಒದಗಿಸಿದ ಹಣ ಮತ್ತು ನೀಡಲಾದ ಸೌಲಭ್ಯಗಳ ವಿವರಗಳಿರುವ ಪಟ್ಟಿಯನ್ನು ಸದನದ ಮೇಜಿನ ಮೇಲೆ ಇಡಲಾಗಿದೆ.

ಇ) ಗಿರಿಜನ ಉಪಯೋಜನೆಯಡಿಯಲ್ಲಿ ಕೃಷಿ ಇಲಾಖೆಯ ಮೂಲಕ ೧೯೮೭-೮೮ನೇ ಸಾಲಿನಲ್ಲಿ ೧೯೧ ಫಲಾನುಭವಿಗಳಿಗೆ ಎತ್ತುಗಳನ್ನು ಹಾಗೂ ೩೨ ಫಲಾನುಭವಿಗಳಿಗೆ ಎತ್ತಿನ ಗಾಡಿಗಳನ್ನು ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಒದಗಿಸಲಾಗಿದೆ.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ತೆಗೆದುಕೊಂಡಿರುವ ಸಣ್ಣ ನೀರಾವರಿ ಕೆಲಸಗಳ ಬಗ್ಗೆ

೧೪೨೧ (೨೬೧೬) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಸಣ್ಣ ನೀರಾವರಿಯಲ್ಲಿ ತೆಗೆದು ಕೊಂಡಿರುವ ಕಾಮಗಾರಿಗಳು ಎಷ್ಟು? (ಎಲ್ಲೆಲ್ಲಿ ಎಂಬುದು ವಿವರ ನೀಡುವುದು)

ಆ) ಈ ಕಾಮಗಾರಿಗಳಿಗೆ ಪಾವತಿ ಮಾಡಿರುವ ಹಣ ಎಷ್ಟು? (ವಿವರ ನೀಡುವುದು)

ಇ) ಇನ್ನೂ ಪಾವತಿ ಮಾಡಬೇಕಾಗಿರುವ ಹಣ ಎಷ್ಟು?

ಈ) ವಿಶ್ವಬ್ಯಾಂಕ್ ನೆರವಿನಿಂದ ತೆಗೆದುಕೊಂಡಿರುವ ಕೆಲಸಗಳೆಷ್ಟು, ಅವುಗಳಿಗೆ ನೀಡಲಾಗಿರುವ ಹಣ ಎಷ್ಟು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಆ) ಮತ್ತು ಈ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಒಂದು ಹೊಸ ಕಾಮಗಾರಿಯನ್ನು ಕೈಗೊಂಡಿದ್ದು, ಅದು ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ತೆಗೆದು ಕೊಂಡಿರುವ ಭೀಮನಹಳ್ಳಿ ಹೊಸಕೆರೆಯ ಯೋಜನೆಯಾಗಿದೆ. ಈ ಕಾಮಗಾರಿಗಾಗಿ ಈ ಮೂರು ವರ್ಷಗಳಲ್ಲಿ 42.30 ಲಕ್ಷ ರೂ.ಗಳನ್ನು ಪಾವತಿ ಮಾಡಲಾಗಿದೆ. ಯೋಜನೇತರ ಅಡಿಯಲ್ಲಿ ಒಟ್ಟು 418 ಸಣ್ಣ ನೀರಾವರಿ ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, 59.50 ಲಕ್ಷ ರೂ.ಗಳಷ್ಟು ಹಣವನ್ನು ಪಾವತಿ ಮಾಡಲಾಗಿದ್ದು ದಿನಾಂಕ 30-5-88ರ ಅಂತ್ಯದವರೆಗೆ 5.28 ಲಕ್ಷ ರೂ.ಗಳಷ್ಟು ಹಣವನ್ನು ಪಾವತಿ ಮಾಡಲಾಗಿದ್ದು ದಿನಾಂಕ 30-5-88ರ ಅಂತ್ಯದವರೆಗೆ 5.28 ಲಕ್ಷ ರೂ.ಗಳಷ್ಟು ಹಣ ಪಾವತಿ ಮಾಡಬೇಕಾಗಿದೆ.

ಕಬಿನಿ ಮುಳುಗಡೆಯಾದವರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

1425 (2620) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ),—ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—